## ಅಪರ ಸಿವಿಲ್ ನ್ಯಾಯಾದೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ

## ಸೊರಬ

ಸಿಸಿ ನಂ.106/2021

**ಪಿರ್ಯಾದುದಾರರುಃ-** ಆನವಟ್ಟಿ ಪೋಲೀಸ್

ವಿರುದ್ದ

ಆರೋಪಿತರು :- ನಟರಾಜ್ ಬಿನ್ ಬಸವರಾಜಪ್ಪ , 27 ವರ್ಷ,
ವಾಸಃ ಬಾರಂಗಿ ಗ್ರಾಮ,
ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

## ಆಪಾದನೆ

ಮೊದಲನೆಯದಾಗಿ, ನೀವು, ದಿನಾಂಕಃ 29.10.2020 ರಂದು ಸಂಜೆ ಸುಮಾರು 7.15 ಗಂಟೆಗೆ ಸೊರಬ ತಾಲ್ಲೂಕು, ತಲ್ಲೂರು ಗ್ರಾಮದ ಮನೆಯ ಎದುರು ಆನವಟ್ಟಿ - ಶಿರಾಳಕೊಪ್ಪ ಮುಖ್ಯ ರಸ್ತೆಯಲ್ಲಿ ದ್ವಿಚಕ್ರ ವಾಹನ ಸಂಖ್ಯೆ ಕೆಎ.15-ಇಡಿ-3357 ರಲ್ಲಿ ಸಹಸವಾರ ಬಸವರಾಜಪ್ಪ ರವರನ್ನು ಕೂರಿಸಿಕೊಂಡು, ಅತೀವೇಗ ಅಥವಾ ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ, ಇದು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತದೆ.

ಎರಡನೇಯದಾಗಿ, ನೀವು, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ದ್ವಿಚಕ್ರ ವಾಹನ ಸಂಖ್ಯೆ ಕೆಎ.15-ಇಡಿ-3357 ಅನ್ನು ಅತೀ ವೇಗ ಅಥವಾ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಿಯಂತ್ರಣ ತಪ್ಪಿ ಅಪಘಾತ ಪಡಿಸಿ ಆ ಕಾರಣ ಸದರಿ ಬಸವರಾಜಪ್ಪ ಮೃತಪಟ್ಟಿದ್ದು. ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ.

ಪ್ರಶ್ನೆ. 1. ನಿಮಗೆ ಈ ಪ್ರಕರಣದಲ್ಲಿ ಮಾಡಿರುವ ಅಪಾದನೆ ಅಂಶಗಳನ್ನು ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಗಿ ಮನವರಿಕೆಯಾಯಿತೇ?

**ಉತ್ತರಃ-** ಆರೋಪಿಃ

ಪ್ರಶ್ನೆ 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

**ಉತ್ತರಃ-** ಆರೋಪಿಃ

(ದಿನಾಂಕಃ 13.07.2023 ರಂದು ಆರೋಪಿಯಿಂದ ಮೇಲ್ಕಂಡ ಅಪಾದನೆ ನೀಡಲ್ಪಟ್ಟಿರುತ್ತದೆ ಎಂದು ದೃಡೀಕರಿಸಿದೆ).

ಸಿ/ಸಿ ಅಪರ ಸಿವಿಲ್ ನ್ಯಾಯಾದೀಶರು ಮತ್ತು
ಜೆ.ಎಂ.ಎಫ್.ಸಿ ಸೊರಬ